ದೇಶದ ಪ್ರಗತಿಯಲ್ಲಿ ತಾಂತ್ರಿಕ ವಿದ್ಯಾರ್ಥಿಗಳ ಕೊಡುಗೆ ಅಗತ್ಯ

ಸಂ.ಕ.ಸಮಾಚಾರ, ಬೆಂಗಳೂರು

ತಾಂತ್ರಿಕ ಓದುವ ವಿದ್ಯಾರ್ಥಿಗಳು ಶಿಸ್ತಿನ ಅಧ್ಯಯನ ಹಾಗೂ ಸತತ ಪರಿಶ್ರಮದಿಂದ ದೇಶದ ಪ್ರಗತಿಗೆ ಕೊಡುಗೆ ನೀಡಬೇಕಿದೆ ಎಂದು ನ್ಯಾಕ್ ಅಧ್ಯಕ್ಷ ಡಾ. ಗಣೇಶ್ ಕಣ್ಣಬೀರನ್ ಕರೆ ನೀಡಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ವಿದ್ಯಾರ್ಥಿ ಶಿಕ್ಷಣ ಸೇವಾ ಟ್ರಸ್ಟ್ ವತಿಯಿಂದ ಆಚಾರ್ಯ ತಾಂತ್ರಿಕ ಮಹಾವಿದ್ಯಾಲಯದ ಆವರಣದಲ್ಲಿ ಆಯೋಜಿಸಿದ್ದ ಸೃಷ್ಟಿ-2025 ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತ ದೇಶವು ಸ್ವದೇಶಿ ರಕ್ಷಣಾ ತಂತ್ರಜ್ಞಾನದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವುದನ್ನು ಆಪರೇಷನ್ ಸಿಂದೂರ್ ಸಮಯದಲ್ಲಿ ಎಲ್ಲರೂ ನೋಡಿದ್ದೇವೆ. ಈ ನಿಟ್ಟಿನಲ್ಲಿ ತಾಂತ್ರಿಕ ವಿದ್ಯಾರ್ಥಿಗಳು ದೇಶದ ಕೊಡುಗೆಗಾಗಿ ಹೆಚ್ಚಿನ ಶ್ರಮವಹಿಸಬೇಕು ಎಂದು ಹೇಳಿದರು.

ಸಾಫ್ಟ್‌ವೇರ್ ಟೆಕ್ ಪಾರ್ಕ್ ಆಫ್ ಇಂಡಿಯಾದ ಡಾ. ಸಂಜಯ್ ತ್ಯಾಗಿ ಮಾತನಾಡಿ, ಭಾರತವು ತಂತ್ರಜ್ಞಾನ ಸೇವಾ ಕ್ಷೇತ್ರದಿಂದ ತಂತ್ರಜ್ಞಾನ ರಫ್ತು ಕ್ಷೇತ್ರವಾಗಿ ಗುರುತಿಸಿಕೊಳ್ಳುವಲ್ಲಿ ಮುನ್ನಡೆಯಬೇಕು ಎಂದು ಆಶಿಸಿದರು.

ಎಬಿವಿಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ವೀರೇಂದ್ರ ಸಿಂಗ್ ಸೋಲಂಕಿ ಮಾತನಾಡಿ, ಕಳೆದ ನೂರು ವರ್ಷಗಳ ಹಿಂದೆ ಭಾರತೀಯ ಯುವಕರು ಪರಕಿಯರಿಂದ ಸ್ವತಂತ್ರ ಪಡೆಯುವುದರ ಬಗೆಗೆ ಯೋಚಿಸುತ್ತಿದ್ದರು. ಆದರಿಂದು ಅಭಿವೃದ್ಧಿ ಹೊಂದಿದ ಭಾರತದ ಕನಸನ್ನು ಕಾಣುತಿದ್ದಾರೆ ಎಂದು ಸಂತಸಪಟ್ಟರು.

ರಾಜ್ಯದ 23 ಜಿಲ್ಲೆಗಳ 70ಕ್ಕೂ ಹೆಚ್ಚು ಕಾಲೇಜುಗಳಿಂದ 250 ಮಾದರಿಗಳ ಪ್ರದರ್ಶನ ನಡೆಯಿತು. ಸೃಷ್ಟಿಯ ಟಾಕ್ಸ್ ಐಡಿಯಾ ತಾನ್, ಹ್ಯಾಕಥಾನ್ ಸೇರಿದಂತೆ ಅನೇಕ ಕಾರ್ಯಾಗಾರಗಳು ನೆರವೇರಿದವು. ಮೂರು ದಿನಗಳ ಕಾರ್ಯಾಗಾರದಲ್ಲಿ 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಎಬಿವಿಪಿ ರಾಜ್ಯಕಾರ್ಯದರ್ಶಿ ಸಚಿನ್ ಕುಳಗೇರಿ, ರಾಜ್ಯ ಉಪಾಧ್ಯಕ್ಷ ವಿನಯ ಸಿಂಗ್ ರಜಪೂತ್, ಕಾಲೇಜಿನ ಪ್ರಾಚಾರ್ಯ ಡಾ. ಮರಿಗೌಡರು, ಬಾಲವೀರ ರೆಡ್ಡಿ ಮತ್ತಿತರರಿದ್ದರು.

ಕೇಂದ್ರ ಸಚಿವ ಮನೋಹರ್ ಲಾಲ್ ಖಟ್ಟರ್ ಅವರನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನಲ್ಲಿ ಭೇಟಿ ಮಾಡಿ ಬೆಂಗಳೂರು ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರದ ಸಹಕಾರ ಕುರಿತು ಸಮಾಲೋಚನೆ ನಡೆಸಿದರು.

ನಾದ ಚೇತನ ಸಂಗೀತ ಕಛೇರಿ

ಬೆಂಗಳೂರು: ನವೋದಯ ನಗರದ ಮಕರಂದ ಫೌಂಡೇಶನ್ ವತಿಯಿಂದ ಆಯೋಜಿಸಲಾಗಿದ್ದ ನಾದ ಚೇತನ ಎಂಬ ವಿಭಿನ್ನ ಸಂಗೀತ ಕಾರ್ಯಕ್ರಮ ನಡೆಯಿತು. 95ರ ಹರೆಯದ ವಿದ್ವಾನ್ ಪ್ರೊ.ಆರ್.ವಿಶ್ವೇಶ್ವರನ್ ಅವರಿಂದ ವೀಣಾ ವಾದನದ ಮಾಂತ್ರಿಕ ಕಛೇರಿ ನಡೆಯಿತು. ಮೊದಲಿಗೆ ತಮ್ಮ ಆರಾಧ್ಯ ದೇವತೆಯಾದ ಸರಸ್ವತಿಯನ್ನು ಸ್ತುತಿಸುವುದರ ಮೂಲಕ ಕಛೇರಿಯನ್ನು ಆರಂಭಿಸಿದರು. ಹರಿಕಾಂಭೋಜಿ ಮತ್ತು ನೀಲಾಂಬರಿ ರಾಗವನ್ನು ಎಳೆ ಎಳೆಯಾಗಿ ಬಿಡಿಸಿ ಶ್ರೋತೃಗಳಿಗೆ ರಸದೌತಣವನ್ನು ಉಣಬಡಿಸಿದರು.

ಕೊನೆಯಲ್ಲಿ ಸಿಂಧುಭೈರವಿ ರಾಗದ ತಿಲ್ಲಾನವನ್ನು ನುಡಿಸಿ ಕಛೇರಿಯನ್ನು ಸಂಪನ್ನಗೊಳಿಸಿದರು. ಪ್ರಸಿದ್ಧ ವಿದ್ವಾಂಸರ (ಸುಮಾ ಸುಧೀಂದ್ರ, ಎಚ್.ಎಸ್ ಸುಧೀಂದ್ರ, ಶುಭ ಸಂತೋಷ್, ಮಂಜುಳಾ ಪರಮೇಶ್, ಚಾಮಿ ಸರ್) ಆಗಮನವು ಸಭೆಗೆ ಇನ್ನೂ ಹೆಚ್ಚಿನ ಮೆರು ತಂದು ಕೊಟ್ಟಿತ್ತು.

ಕಲ್ಪನೆಗೂ ಮೀರಿದ ಕಲಾಕೃತಿ ಅನಾವರಣ

ಬೆಂಗಳೂರು: ಪ್ರಾಕೃತಿಕ ಸೊಬಗನ್ನು ನೋಡುವುದೇ ಒಂದು ಚೆಂದ, ಗ್ರಾಮೀಣರು ಜೀವನಕ್ಕಾಗಿ ಮಿಶ್ರ ಬೇಸಾಯದಲ್ಲಿ ತೊಡಗಿರುವುದು, ವಿಷ್ಣುವಿನ ಅವತಾರಗಳು, ಭೀಮನಿಗೆ ಭಜರಂಗಿಯ ದರ್ಶನ, ಕಾಫೀ ತೋಟದಲ್ಲಿನ ಅಜ್ಜಿ...!

ಹೀಗೆ ಹತ್ತು ಹಲವು ಚಿತ್ರಕಲೆ, ಶಿಲ್ಪ ಕಲೆಗಳು ಕಣ್ಮನಸೆಳೆಯುತ್ತವೆ. ಜೊತೆಗೆ ನಮ್ಮ ಮನಸ್ಸಿನ ಚಿಂತನೆಗೂ ದಾರಿ ಮಾಡಿಕೊಡುತ್ತದೆ. ಕರ್ನಾಟಕ ಲಲಿತಾ ಅಕಾಡೆಮಿ ವತಿಯಿಂದ ನಗರದ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಕಲಾ ಪ್ರದರ್ಶನ ಎಂತಹವರನ್ನು ಅಚ್ಚರಿಪಡಿಸುತ್ತದೆ. 'ಬಲ್ಲವನೇ ಬಲ್ಲ ಬೆಲ್ಲದ ರುಚಿಯ' ಎನ್ನುವ ಹಾಗೆ ಒಂದೊಂದು ಚಿತ್ರಕಲೆಗಳು ಕುತೂಹಲದಿಂದ ಗಮನ ಸೆಳೆಯುತ್ತವೆ. ಊಹಿಸಿಕೊಳ್ಳಲು ಆಗದಂತಹ ವೈಖರಿಯಲ್ಲಿ ಚಿತ್ರಕಲೆ, ಚಿತ್ರಾಕೃತಿಗಳು ವಿಭಿನ್ನವಾಗಿ ಮೂಡಿಬಂದಿದ್ದು, ಒಮ್ಮೆ ಇವುಗಳನ್ನು ಗಮನಿಸಿದ್ದಲ್ಲಿ ಧನ್ಯತಾ ಭಾವ ಮೂಡೇ ಮೂಡುತ್ತದೆ. ವಿಜಯಪುರದ ರಮೇಶ್ ಚೌಹಾಣ್ ಅವರ "ಆನ್‌ಟೈಟಲ್ಡ್" ಎಂಬ ಶೀರ್ಷಿಕೆಯ ಛಾಯಾಚಿತ್ರವಂತೂ ಎಂತಹವರನ್ನು ಅಚ್ಚರಿಯಿಂದ ನೋಡುವಂತೆ ಮಾಡುತ್ತದೆ.

ಕಮಲ್ ಅಹ್ಮದ್ ಅವರ ಭೀಮನಿಗೆ ಭಜರಂಗಿಯ ದರ್ಶನ ತೋರಿಸುವ ಚಿತ್ರಕಲೆ ವಿಶಿಷ್ಟ ಬಗೆಯಲ್ಲಿ ಮೂಡಿಬಂದಿದೆ. ಮೈಸೂರಿನ ಎನ್.ದಯಾನಂದ ಅವರ ಕಣಜ ಪ್ರತಿಷ್ಠಾಪನಾ ಕಲೆಯಂತೂ ವಿಭಿನ್ನವಾಗಿದೆ. ಶ್ರೀಕೃಷ್ಣಾಚಾರಿ ಅವರ ಗ್ರಾಮೀಣ ಬದುಕಿನ ವೈಖರಿ ತೋರಿಸುವ ಚಿತ್ರಾಕೃತಿ ವಿಶೇಷವಾಗಿ ಗಮನಸೆಳೆಯುತ್ತದೆ. 200ಕ್ಕೂ ಹೆಚ್ಚು ಚಿತ್ರಕಲೆ, ಚಿತ್ರಾಕೃತಿಗಳು ಬಿ.ಪಿ.ವಾಡಿಯಾ ಸಭಾಂಗಣದಲ್ಲಿ ಪ್ರದರ್ಶನಗೊಂಡಿವೆ. ನಗರವಾಸಿಗಳು ನೋಡಲೇಬೇಕಾದ ಕಲಾ ಪ್ರದರ್ಶನ ಕೂಡ ಆಗಿದೆ ಎಂದು ಕಲಾವಿದರು ಹೇಳುತ್ತಾರೆ.

IN THE COURT OF VII ADDL CITY CIVIL & SESSIONS JUDGE AT BANGALORE
P & SC. No. 211 of 2025 (CCCH No.19)

BETWEEN: 1. Mrs. PRABHA BIHANI, D/o. Late Deo Kishan Mohta, Aged about 66 years, residing at Gautam Enclave, 3rd Floor, 7/5, Burdwan Road, Alipore H.D, Kolkata, West Bengal-700027. Represented by her Special Power of Attorney Holder. Mr. VIJAY KUMAR MOHTA, S/o. Late Deo Kishan Mohta, Aged about 62 years, **2. SRI. VIJAY KUMAR MOHTA,** S/o. Late Deo Kishan Mohta, Aged about 62 years, Residing at No. 161, 2nd Main,4th Cross, 1st Block, Aswathanagar, RMV 2nd Stage, Bangalore-560094. **3. SMT.ASHA DEVI,** W/o. Late Radha Kishan Mohta, Aged about 83 years, **4. SRI. RAGHAVENDRA MOHTA,** S/o. Late Radha Kishan Mohta, Aged about 56 years, **5. Smt. SHRUTI KANORIA,** W/o. Sri. Raghavendra Mohta, Aged about 55years, And daughter in law of Late Radha Kishan Mohta, No.3 to 5 are residing at No.6, Ashoka Road, Jaisalmer, Flat No.403/503, Alipore, Kolkata-700027, West Bengal state. Petitioner No.3 to 5 are Represented by Their Special Power of Attorney Holder: Mr. VIJAY KUMAR MOHTA, S/o. Late Deo Kishan Mohta, Aged about 62 years ... **PETITIONERS**

AND: NILL ... RESPONDENT

PUBLIC NOTICE

Whereas, the above named petitioners have made petition to this court under Section 372 of the Indian Succession Act 1925, for the grant of Succession Certificate in favour of the Petitioners in respect of the schedule property mentioned herein below The below mentioned schedule movable property has held jointly by Late Deo Kishan Mohta and Late Radha Kishan Mohta, both were son of Late Prem Ratan Mohta. The Petitioner No.1 is the sister of the Petitioner No.2 and the Petitioner No.1 was the daughter and the Petitioner No.2 was the son of late Deo Kishan Mohta. The Petitioner No.3 was the wife of Late Radha Kishan Mohta, the Petitioner No.4 was the son of Late Radha Kishan Mohta, and the Petitioner No.5 was the daughter in law of Late Radha Kishan Mohta and wife of Raghavendra Mohta, here in. Late Deo Kishan Mohta died on 08-09-1993 and Late Radha Kishan Mohta died on 05-09-1989.

Interested parties are hereby called upon to appear before this court in person or by pleader duly instructed on **26-06-2025** at 11:00 AM inform to show cause against the petitioners failing which, where in appearance, the petition will be heard and declared as exparte.

SCHEDULE OF MOVABLE PROPERTY/SHARES

Sl No.	Particulars of the Share	Share No.	Amount in Rs
1.	1750 Equity share of M/s. KIRLOSKAR PNEUMATIC COMPANY LIMITED bearing distinctive No.479861 to 481610, which jointly stands in the names of Sri. Deo Kishan Mohta and Sri. Radha Kishan Mohta both were sons of Late Prem Ratan Mohta	1750	19,29,463/-
		Total	19,29,463/-

Given under my hand and the seal of the court on 21-05-2025.
By order of the court, Senior Sheristedar, City civil court at Bangalore.

M.V. KINI & Co., Advocates & Solicitors,
No.32/12,3A, 3rd Floor, Alsa Glendridge, Opp. St.Joseph College,
Langford Road, Bengaluru - 560 025.

ಕ್ಯಾನ್ ಫಿನ್ ಹೋಮ್ಸ್ ಲಿ.,
Can Fin Homes Ltd (Sponsor: CANARA BANK)
ಶ್ರೀ ಅನ್ನಪೂರ್ಣೆಶ್ವರಿ ಕಾಂಪ್ಲೆಕ್ಸ್,
ಕೆನರಾ ಬ್ಯಾಂಕ್‌ನ ಮೇಲ್ಗಡೆ, ಬಿ.ಜಿ.ಎಸ್. ರಸ್ತೆ,
ಬೆಂಗಳೂರು - 562 109, ಫೋನ್ : 080-2728250,
ಮೊಬೈಲ್ : 76250 79189
e-mail Id: bidadi@canfinhomes.com
CIN No. L85110KA1987PLC008699
ಬಿಡದಿ ಶಾಖೆ

ಅಸೆಂಡಿಕ್ಸ್ IV-A
[ನಿಯಮ 9(1)ರ ಅನ್ವಯ]
ಸ್ಥಿರಾಸ್ತಿಯ ಮಾರಾಟಕ್ಕಾಗಿ ಮಾರಾಟ ಸೂಚನೆ

ಸೆಕ್ಯುರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್ 2002 ಮತ್ತು ನಿಯಮ 9(1)ರ ನಿಬಂಧನೆಗಳನ್ನು ಓದಿಕೊಂಡಂತೆ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು 2002ರ ಅನ್ವಯ ಸ್ಥಿರಾಸ್ತಿಯ ಇ-ಮಾರಾಟ ಸೂಚನೆ

ನಿರ್ದಿಷ್ಟವಾಗಿ ಸಾಲಗಾರರಿಗೆ ಹಾಗೂ ಸಾಮಾನ್ಯವಾಗಿ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಸೆಕ್ಯೂರ್ಡ್ ಕ್ರೆಡಿಟರವರಿಗೆ ಅಡಮಾನ /ಚಾರ್ಜ್ ಮಾಡಿರುವ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು ಕ್ಯಾನ್‌ಫಿನ್‌ಹೋಮ್ಸ್‌ಲಿ., ಬಿಡದಿ ಶಾಖೆ, ಇದರ ಅಧಿಕೃತ ಅಧಿಕಾರಿಯವರು ಭೌತಿಕವಾಗಿ ಸ್ವಾಧೀನಕ್ಕೆ ಪಡೆದುಕೊಂಡಿದ್ದು ಆವುಗಳನ್ನು 'ಎಲ್ಲಿ ಹೇಗಿದೆಯೊ ಹಾಗೆ', 'ಎಲ್ಲಿ ಏನಿದೆಯೋ ಹಾಗೆ' ಮತ್ತು 'ಮತ್ಯಾವುದಾದರೂ ಅಲ್ಲಿ ಇದ್ದಲ್ಲಿ,' ಆಧಾರದ ಮೇಲೆ ಕ್ಯಾನ್‌ಫಿನ್‌ಹೋಮ್ಸ್‌ಲಿ., ಇವರಿಗೆ ಸಾಲಗಾರರಾದ **ಶ್ರೀ ಪರಮೇಶ್ ಹೆಚ್., ಮತ್ತು ಶ್ರೀಮತಿ ಡಿ.ಟಿ. ಜಯಲಕ್ಷ್ಮಿ ಮತ್ತು ಶ್ರೀ ಕರಿಬಸಪ್ಪ ಎಸ್ (ಜಾಮೀನುದಾರರು)** ಇವರಿಂದ ಬರಬೇಕಾದ ಬಾಕಿ ಮೊತ್ತ **ರೂ.50,27,522/-** (ರೂಪಾಯಿ ಐವತ್ತು ಲಕ್ಷ ಇಪ್ಪತ್ತೇಳು ಸಾವಿರದ ಐದು ನೂರ ಇಪ್ಪತ್ತೆರಡು ಮಾತ್ರ) ದಿನಾಂಕ 23.05.2025 ರಂತೆ ಮತ್ತು ಮುಂದಿನ ಬಡ್ಡಿ ಮತ್ತು ಸಾಂದರ್ಭಿಕ ಖರ್ಚು, ವೆಚ್ಚ ಇತ್ಯಾದಿಗಳ ವಸೂಲಿಗಾಗಿ ದಿನಾಂಕ **13.06.2025** ರಂದು ಮಾರಾಟ ಮಾಡಲಾಗುವುದು.

ಮೀಸಲು ಬೆಲೆ ರೂ.53, 00,000/- (ರೂಪಾಯಿ ಐವತ್ತ ಮೂರು ಲಕ್ಷ ಮಾತ್ರ) ಮತ್ತು **ಮುಂಗಡ ಠೇವಣಿ ರೂ.5,30,000/-**(ರೂಪಾಯಿ ಐದು ಲಕ್ಷ ಮೂವತ್ತು ಸಾವಿರ ಮಾತ್ರ)

ಸ್ಥಿರಾಸ್ತಿಯ ವಿವರ

ಬೆಂಗಳೂರು, ಯಶವಂತಪುರ ಹೋಬಳಿ, ಮಾಳಗಾಳು ಗ್ರಾಮ, ಇಲ್ಲಿರುವ ನಿವೇಶನ ನಂ.239ರ ದಕ್ಷಿಣದ ಅರ್ಧ ಭಾಗ ಸರ್ವೆ ನಂ. 52, ಖಾತಾ ನಂ. 1430, ಬಿಬಿಎಂಪಿ ವಾರ್ಡ್ ನಂ. 127, ಅಳತೆ : ಪೂರ್ವದಿಂದ ಪಶ್ಚಿಮಕ್ಕೆ : 40 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 15 ಅಡಿ ಒಟ್ಟು ಅಳತೆ 600 ಚದರ ಅಡಿ ಈ ಆಸ್ತಿಯ ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಆಸ್ತಿ ನಂ 238, ಉತ್ತರಕ್ಕೆ : ಅದೇ ನಿವೇಶನ ನಂ. 239ರ ಉತ್ತರದ ಅರ್ಧ ಭಾಗ, ಮತ್ತು ದಕ್ಷಿಣಕ್ಕೆ : ಆಸ್ತಿ ನಂ 240.

ಋಣಭಾರಗಳು : ಇಲ್ಲ

ಮೇಲ್ಕಂಡ ಹರಾಜಿಗೆ ಸಂಬಂಧಿಸಿದ ನಿಯಮ ಮತ್ತು ನಿಬಂಧನೆಗಳ ವಿವರಗಳಿಗೆ ಕ್ಯಾನ್‌ಫಿನ್‌ಹೋಮ್ಸ್ ಲಿ., ಇವರ ಅಫೀಷಿಯಲ್ ವೆಬ್‌ಸೈಟ್ https://www.canfinhomes.com/Search Auction.aspx ನಲ್ಲಿ ವೀಕ್ಷಿಸಬಹುದು. ಇ- ಹರಾಜಿನಲ್ಲಿ ಭಾಗವಹಿಸಲು ಲಿಂಕ್ : www.bankeauctionwizard.com

ದಿನಾಂಕ : 23.05.2025
ಸ್ಥಳ : ಬಿಡದಿ

ಸಹಿ/-
ಅಧಿಕೃತ ಅಧಿಕಾರಿ
ಕ್ಯಾನ್ ಫಿನ್ ಹೋಮ್ಸ್ ಲಿ.,

ADITYA BIRLA CAPITAL — PROTECTING INVESTING FINANCING ADVISING
ಆದಿತ್ಯ ಬಿರ್ಲಾ ಕ್ಯಾಪಿಟಲ್ ಲಿಮಿಟೆಡ್
ನೋಂದಾಯಿತ ಕಚೇರಿ: ಇಂಡಿಯನ್ ರೇಯಾನ್ ಕಾಂಪೌಂಡ್, ವೆರಾವಲ್, ಗುಜರಾತ್-362266
ಶಾಖೆಯ ವಿಳಾಸ: ಸಂಖ್ಯೆ 01/78, ಸ್ಟಾರ್ ಅವೆನ್ಯೂ, 6ನೇ ಕ್ರಾಸ್, ವಿಕ್ಟೋರಿಯಾ ರಸ್ತೆ, ವಿಕ್ಟೋರಿಯಾ ಲೇಔಟ್, ಬೆಂಗಳೂರು, ಕರ್ನಾಟಕ - 560047.

ಅನುಬಂಧ-IV - ಸ್ವಾಧೀನ ಸೂಚನೆ
[ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8 (1), 2002]

ಆದಾಗ್ಯೂ, ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್ ಮತ್ತು ಆದಿತ್ಯ ಬಿರ್ಲಾ ಕ್ಯಾಪಿಟಲ್ ಲಿಮಿಟೆಡ್ ನಡುವಿನ ವಿಲೀನದ ಕಾರಣದಿಂದಾಗಿ, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ - ಅಹಮದಾಬಾದ್ 24.03.2025 ರಂದು ಹೊರಡಿಸಿದ ಆದೇಶದಲ್ಲಿ ಸರಿಯಾಗಿ ದಾಖಲಿಸಲಾದ 11.03.2024 ರ ವಿಲೀನ ಯೋಜನೆಯ ಪ್ರಕಾರ, ಕೆಳಗಿನ ವೇಳಾಪಟ್ಟಿಯಲ್ಲಿ ಉಲ್ಲೇಖಿಸಲಾದ ಅಡಮಾನದ ಆಸ್ತಿಗೆ ಸಂಬಂಧಿಸಿದಂತೆ ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್ ಪ್ರಾರಂಭಿಸಿದ ಎಲ್ಲಾ ಸರ್ಫೇಸಿ ಕ್ರಮಗಳು ವಿಲೀನಗೊಂಡ ಕಂಪನಿಯಾದ ಆದಿತ್ಯ ಬಿರ್ಲಾ ಕ್ಯಾಪಿಟಲ್ ಲಿಮಿಟೆಡ್‌ಗೆ ವರ್ಗಾಯಿಸಲ್ಪಟ್ಟಿವೆ.

ಅಂತೆಯೇ, ಕೆಳಗೆ ಸಹಿ ಮಾಡಿರುವ ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿ (ಈಗ ಆದಿತ್ಯ ಬಿರ್ಲಾ ಕ್ಯಾಪಿಟಲ್ ಲಿಮಿಟೆಡ್) ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಸೆಕ್ಯುರಿಟಿ ಬಡ್ಡಿ ಜಾರಿ ಕಾಯ್ದೆ, 2002 (2002 ರ 54) ಅಡಿಯಲ್ಲಿ ಮತ್ತು ಸೆಕ್ಯುರಿಟಿ ಬಡ್ಡಿ ನಿಯಮಗಳ ನಿಯಮ 3 ರೊಂದಿಗೆ ಓದಲಾದ ಸೆಕ್ಷನ್ 13(12) ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸುವಲ್ಲಿ (ಜಾರಿ) ನಿಯಮಗಳು, 2002 ರಂದು 08.08.2024 ರಂದು ಬೇಡಿಕೆ ಸೂಚನೆಯನ್ನು ಹೊರಡಿಸಲಾಗಿದೆ. **1. ಮೆ॥ ಶಾಶ್ವತಿ ರियಾಲ್ಟಿ ಪ್ರೈವೇಟ್ ಲಿಮಿಟೆಡ್, 2. ಮೆ॥. ಶಾಂಭವಿ ರियಾಲ್ಟಿ ಪ್ರೈವೇಟ್ ಲಿಮಿಟೆಡ್, 3. ಮೆ॥ ಧ್ಯಾನ ಬಿಲ್ಡ್‌ಕಾನ್ ಪ್ರೈವೇಟ್ ಲಿಮಿಟೆಡ್ (DBPL), 4. ಮೆ॥ ಪ್ರಪ್ತಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ (PDPL), 5. ಮೆ॥ ಇಪ್ಸಿತಾ ರियಾಲ್ಟಿ ಪ್ರೈವೇಟ್ ಲಿಮಿಟೆಡ್ (IRPL), 6. ಮೆ॥ ಸ್ವರಿತ್ ರियಾಲ್ಟಿ ಪ್ರೈವೇಟ್ ಲಿಮಿಟೆಡ್ (SHRPL), 7. ಶ್ರೀ ಅಸಿತ್ ಕೋಟೆಚಾ ಮತ್ತು 8. ಶ್ರೀಮತಿ ಕಾನನ್ ಕೋಟೆಚಾ ಸಾಲಗಾರರು / ಸಹ-ಸಾಲಗಾರರು / ಅಡಮಾನದಾರರು ಎಂದು ಸೂಚನೆಯಲ್ಲಿ ಉಲ್ಲೇಖಿಸಲಾದ ಮೊತ್ತವನ್ನು ವಸೂಲಿಸಲು ರೂ. 18,61,00,818.19 (ಹದಿನೆಂಟು ಕೋಟಿ ಅರವತ್ತೊಂದು ಲಕ್ಷ ಎಂಟುನೂರ ಹದಿನೆಂಟು ರೂಪಾಯಿ ಮತ್ತು ಹತ್ತೊಂಬತ್ತು ಪೈಸೆ ಮಾತ್ರ) 31.07.2024 ರಂತೆ ಹೇಳಿದ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳಲ್ಲಿ ಹೆಚ್ಚಿನ ಬಡ್ಡಿಯೊಂದಿಗೆ ಮತ್ತು ಬೇಡಿಕೆ ಸೂಚನೆಯ ದಿನಾಂಕದಿಂದ ಪಾವತಿ / ವಸೂಲಾತಿ ದಿನಾಂಕದವರೆಗೆ ಇತರ ಶುಲ್ಕಗಳು.**

ಸಾಲಗಾರರು / ಸಹ-ಸಾಲಗಾರರು / ಅಡಮಾನದಾರರು / ಜಾಮೀನುದಾರರು ಸಂಪೂರ್ಣ ನೋಟಿಸ್ ಮೊತ್ತವನ್ನು ಹೆಚ್ಚಿನ ಬಡ್ಡಿ ಮತ್ತು ಇತರ ಶುಲ್ಕಗಳೊಂದಿಗೆ ಮರುಪಾವತಿಸಲು ವಿಫಲರಾಗಿದ್ದಾರೆ, ಸಾಲಗಾರರು ಮತ್ತು ಸಾರ್ವಜನಿಕರಿಗೆ ಇಲ್ಲಿ ಕೆಳಗೆ ಸಹಿ ಮಾಡಿದವರು ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನವನ್ನು** ಪಡೆದುಕೊಂಡಿದ್ದಾರೆ ಎಂದು ಸೂಚನೆ ನೀಡಲಾಗಿದೆ, ಇದನ್ನು ಸೆಕ್ಯುರಿಟಿ ಬಡ್ಡಿ (ಜಾರಿ) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾದ ಕಾಯ್ದೆಯ ಸೆಕ್ಷನ್ 13 ರ ಉಪ-ವಿಭಾಗ (4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರಗಳನ್ನು ಚಲಾಯಿಸುವ ಮೂಲಕ **ಡಿಸೆಂಬರ್ 03, 2024 ರಂದು** ನೀಡಲಾಗಿದೆ.

ಮೇಲಿನ ಸಂದರ್ಭಗಳಲ್ಲಿ **ಮೇ 23, 2025 ರಂದು,** ಸರ್ಫೇಸಿ ಕಾಯ್ದೆಯ ಸೆಕ್ಷನ್ 14 ರ ಅಡಿಯಲ್ಲಿ ಸದರಿ ಆಸ್ತಿಯಲ್ಲಿ ಲಭ್ಯವಿರುವ ವಸ್ತುಗಳ ದಾಸ್ತಾನು ಮಾಡಿದ ನಂತರ, ವಕೀಲ ಆಯುಕ್ತರು ಕೆಳಗೆ ಉಲ್ಲೇಖಿಸಲಾದ ಆಸ್ತಿಯ **ಭೌತಿಕ ಸ್ವಾಧೀನವನ್ನು** ವಹಿಸಿಕೊಂಡರು ಮತ್ತು 2025 ರ Crl.MP. ಸಂಖ್ಯೆ 253 ರಲ್ಲಿ ಬೆಂಗಳೂರಿನ ಗೌರವಾನ್ವಿತ CJM ಅವರು **04.03.2025** ರಂದು ಹೊರಡಿಸಿದ ಆದೇಶದ ಪ್ರಕಾರ ಕೆಳಗೆ ಸಹಿ ಮಾಡಿದ ಅಧಿಕೃತ ಅಧಿಕಾರಿಗೆ ಸ್ವಾಧೀನವನ್ನು ಹಸ್ತಾಂತರಿಸಿದರು.

ಸಾಲಗಾರರು ಮತ್ತು ಸಹ-ಸಾಲಗಾರರು, ವಿಶೇಷವಾಗಿ ಸಾರ್ವಜನಿಕರು ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರವು ಆ